ಒಳ್ಳೆಯ ಕೆಲಸ ಹಾಗೂ ಉತ್ತಮ ಭವಿಷ್ಯದ ಆಸೆ ತೋರಿಸಿ ಕರೆತಂದು ನಗರಗಳಲ್ಲಿ ಮಾರಿ ಹೋಗುವುದೂ ಸಾಮಾನ್ಯ. ದೊಡ್ಡ ನಗರಗಳಲ್ಲಿ ಕೆಲಸ ಕೊಡಿಸುವ ಕೇಂದ್ರ (**Placement Agencies**)ಗಳು ಅತ್ಯಂತ ವ್ಯವಸ್ಥಿತವಾಗಿ ಈ ಕೆಲಸಗಳನ್ನು ಮಾಡುತ್ತಿವೆ. ಆಧುನಿಕ ಸಮಾಜದ ನವೀಕೃತ ಜೀತಪದ್ಧತಿ ಇದು. ಎಷ್ಟೋ ವಿದ್ಯಾವಂತ, ಸುಶಿಕ್ಷಿತ ಕುಟುಂಬದ ಜನರೇ ಕೆಲಸಕ್ಕಾಗಿ ಮಕ್ಕಳನ್ನು ಖರೀದಿಸುತ್ತಾರೆ. ಹಾಗೆ ಖರೀದಿಸಿದ ಮಕ್ಕಳ ಮೇಲೆ ಅನೇಕ ಬಾರಿ ಲೈಂಗಿಕ ಶೋಷಣೆಗಳು ಆಗುವುದೂ ಸಾಮಾನ್ಯ. ದುರದೃಷ್ಟವಶಾತ್ ಇಂತಹ ಘಟನೆಗಳು ಬೆಳಕಿಗೆ ಬರುವುದು ಬಹಳ ಕಡಿಮೆ.

ಇನ್ನು ದಿಡೀರ್ ಶ್ರೀಮಂತಿಕೆ ಹೊಂದಬಯಸುವ ಉದ್ದೇಶದಿಂದ ಶ್ರೀಮಂತರ ಮಕ್ಕಳನ್ನು ಅಪಹರಿಸಿ ಹಣಕ್ಕಾಗಿ ಬೇಡಿಕೆ ಇಡುವುದು; ಅಕಸ್ಮಾತ್ ಸಿಕ್ಕಿ ಹಾಕಿಕೊಳ್ಳಬಹುದು ಎನಿಸಿದಾಗ ಮಕ್ಕಳನ್ನು ಕೊಲ್ಲುವ ಇಲ್ಲವೆ ಮಾರಾಟ ಮಾಡಿ ಹೋಗುವ ಪ್ರಕರಣಗಳೂ ಸಾಕಷ್ಟು ದಾಖಲಾಗುತ್ತಿವೆ.

ಮಕ್ಕಳನ್ನು ಅತ್ಯಂತ ಕಾನೂನು ಬದ್ಧವಾಗಿಯೇ ದತ್ತು ಪ್ರಕ್ರಿಯೆ ಮೂಲಕ ವಿದೇಶಗಳಿಗೆ ಅನೈತಿಕ ಕೆಲಸಗಳಿಗೆ ರವಾನಿಸುವ ಧಂದೆಕೋರರು ಕೂಡ ನಮ್ಮಲ್ಲಿ ಇದ್ದಾರೆ. ಅದೆಷ್ಟೋ ಸ್ವಯಂ ಸೇವಾ ಸಂಸ್ಥೆಗಳು, ಹೆರಿಗೆ ಆಸ್ಪತ್ರೆಗಳು, ವೈದ್ಯರು, ಸಮಾಜ ಸೇವಕರು ಎನಿಸಿಕೊಂಡವರು ಇಂತಹ ಕೆಲಸಗಳಲ್ಲಿ ತೊಡಗಿರುವುದು ಆಗಾಗ ಅವರು ಸಿಕ್ಕಿ ಹಾಕಿಕೊಂಡಾಗಲೇ ಗೊತ್ತಾಗುವುದು.

ಅಪರಾಧಿ ಜಗತ್ತಿನ ಕೈಚಳಕ ಇಲ್ಲದೆಯೂ ಸಾವಿರಾರು ಮಕ್ಕಳು ಇವತ್ತು ಕಣ್ಮರೆಯಾಗುತ್ತಿದ್ದಾರೆ. ಮಕ್ಕಳ ಕಣ್ಮರೆಯ ಈ ವಿಷಾದಕರ ಮುಖಕ್ಕೆ ಮನೋವೈಜ್ಞಾನಿಕ ಕಾರಣಗಳೇ ಹೆಚ್ಚು. ಈ ಕಾರಣಗಳನ್ನು ಕೆದಕಿದಾಗ, ಎಷ್ಟೋ ಪೋಷಕರು 'ಅಯ್ಯೋ, ನಮಗೆ ನಮ್ಮ ಮಕ್ಕಳು ಮನಸ್ಸು ಅರ್ಥವೇ ಆಗಲಿಲ್ಲವೆ...' ಎಂದು ಪಶ್ಚಾತ್ತಾಪ ಪಟ್ಟುಕೊಳ್ಳುವುದೂ ಇದೆ.

ನಗರೀಕರಣದ ಪರಿಸರದಲ್ಲಿ ದಿನವಿಡೀ ಬಿಡುವಿಲ್ಲದಂತೆ ದುಡಿಯುವ ತಾಳ್ಮೆರಹಿತ ಜೀವನ, ನಾವಾಗಿ ಸೃಷ್ಟಿಸಿಕೊಂಡ ಕೃತಕ ಸಮಾಜದ ಕರಾಳ ಮುಖಗಳು. ಈ ಮುಖಗಳೇ ತಮ್ಮ ಗಟ್ಟಿಯಾದ ಕೈಗಳಿಂದ ಮುಗ್ಧ ಮಕ್ಕಳ ಮನಸ್ಸು, ಹೃದಯಗಳನ್ನು ಹಿಂಡುತ್ತಿವೆ. ಸಂಪತ್ತೆಂಬ ಮಾಯಾಜಿಂಕೆಯ ಬೆನ್ನುಹತ್ತಿದ ದಂಪತಿಗಳು ತಮ್ಮ ಗುರಿ ತಲುಪುವ ಅವಸರದಲ್ಲಿ ಮಕ್ಕಳನ್ನು ನಿರ್ಲಕ್ಷಿಸುತ್ತಿರುವ ಉದಾಹರಣೆಗಳು ಹೆಚ್ಚಾಗುತ್ತಿವೆ. ಒಳ್ಳೆಯ ಶಾಲೆ, ಒಳ್ಳೆಯ ಟ್ಯೂಷನ್, ಬಟ್ಟೆ ಹಾಗೂ ಭವಿಷ್ಯದಲ್ಲಿ ಒಳ್ಳೆಯ ಉದ್ಯೋಗ ಕೊಡಿಸುವ ನಿಟ್ಟಿನಲ್ಲಿ ಪೋಷಕರು ಹೇರುತ್ತಿರುವ ಒತ್ತಡಗಳನ್ನು ಎಷ್ಟೋ ಮಕ್ಕಳು ಸಹಿಸಿಕೊಳ್ಳಲು ಅಸಮರ್ಥವಾಗಿವೆ. 6, 7 ಹಾಗೂ 8ನೇ ತರಗತಿ ಮಕ್ಕಳ ಆತ್ಮಹತ್ಯೆ ಪ್ರಕರಣಗಳು ಇತ್ತೀಚೆಗೆ ವರದಿಯಾಗುತ್ತಿರುವುದು ನೋಡಿದರೆ, ಸಮಾಜದ ಸ್ವಾಸ್ಥ್ಯ ಎಷ್ಟರಮಟ್ಟಿಗೆ ಹದಗೆಟ್ಟಿದೆ ಎಂಬುದನ್ನು ಅರ್ಥ ಮಾಡಿಕೊಳ್ಳಬಹುದು.

ಇನ್ನು ವಿಚ್ಛೇದನ (**Divorce**) ಎಂಬುದು ಇತ್ತೀಚಿನ ದಿನಗಳಲ್ಲಿ ಅಸಂತುಷ್ಟ ದಂಪತಿಗಳು ಕಂಡುಕೊಳ್ಳುತ್ತಿರುವ ಒಂದು ಪರಿಹಾರವಾದರೆ, ಅಂತಹ ಕುಟುಂಬದಿಂದ ಹೊರಬರುತ್ತಿರುವ ಮಕ್ಕಳು ತಮ್ಮದೇ ಆದ ವಿಚಿತ್ರ ಸಮಸ್ಯೆಗಳನ್ನು ಹೊಂದಿದ್ದಾರೆ. ದಂಪತಿಗಳು ತಮ್ಮ ಅಹಂಗಳ ಮೇಲಾಟಕ್ಕೋ

ಚಿತ್ರ: ವಿಶ್ವನಾಥ ಸುವರ್ಣ

